**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ**

**ಸಿ.ಸಿ. ನಂ. 487/2019**

ಸಿ.ಡಬ್ಲೂಃ 1 ಪಿ.ಡಬ್ಲೂಃ 1

ಹೆಸರುಃ ಮೈಲಾರಪ್ಪ

ತಂದೆಯ ಹೆಸರುಃ ನೀಲಪ್ಪ ಚಿಕ್ಕಣ್ಣವರ

ವಯಸ್ಸುಃ 36 ವರ್ಷ

ಉದ್ಯೋಗಃ ಒಕ್ಕಲುತನ

ವಿಳಾಸಃ ಮೆಣಸಗಿ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 28/04/2023 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ– ಆರೋಪಿತರ ಪರ ಶ್ರೀ. ಬ. ಅ. ಸಜ್ಜನರ ವಕೀಲರಿಂದಃ**

1. ನನ್ನ ಅಜ್ಜನ ಹೆಸರು ನಿಂಗಪ್ಪ ಅಯ್ಯಪ್ಪ ಚಿಕ್ಕಣ್ಣವರ. ನನ್ನ ಅಜ್ಜ ಮೃತ್ಯು ಪತ್ರ ನನಗೆ ಬರೆದುಕೊಟ್ಟಿದ್ದಾರೆ ಎಂದು ಹಾಗೂ ನಾನೇ ಆಸ್ತಿಗಳ ಮಾಲೀಕ ಎಂದು ಘೋಷಣೆ ಮಾಡಬೇಕೆಂದು ನಾನು ಇದೇ ನ್ಯಾಯಾಲಯದಲ್ಲಿ ಅಸಲು ದಾವೆ ನಂ.316/2019 ರಂತೆ ದಾವೆ ಮಾಡಿದ್ದೆ ಎಂದರೆ ನಿಜ. ನಾನು ಆರೋಪಿತರನ್ನು ಹೇಗಾದರೂ ಮಾಡಿ, ಹಿಡಿತದಲ್ಲಿ ತೆಗೆದುಕೊಳ್ಳಬೇಕು ಎಂದು ನಾನು ಒಂದು ಸುಳ್ಳು ದೂರು ಕೊಟ್ಟಿದ್ದೇನೆಂದರೆ ಸರಿ ಅಲ್ಲ. ಅಸಲು ದಾವೆ ನಂ.316/2019 ಈಗ ರಾಜೀ ಆಗಿದೆ ಎಂದರೆ ನಿಜ. ಆರೋಪಿತರು ಇದೇ ಆಸ್ತಿಗೆ ಸಂಬಂಧಪಟ್ಟಂತೆ ಹಿರಿಯ ಸಿವಿಲ್ ನ್ಯಾಯಾಲಯ ರೋಣದಲ್ಲಿ ಅಸಲು ದಾವೆ ನಂ.18/2020 ರಂತೆ ನಮ್ಮಗಳ ವಿರುದ್ಧ ಹೂಡಿದ್ದರು ಎಂದರೆ ನಿಜ. ಆ ದಾವೆ ಸಹ ಈಗ

ರಾಜೀ ಆಗಿದೆ ಎಂದರೆ ನಿಜ. ಈ ಘಟನೆ ಆಗಿದೆ ಎಂದು ಹೇಳಲಾದ ದಿನ ನಾವು ಜಮೀನು ಹರಗುತ್ತೇವೆ ಎಂದು ಹೇಳಿದರು ಎಂದರೆ ನಿಜ. ಆ ಬಗ್ಗೆ ಬಾಯಿಗೆ ಬಾಯಿ ಆಗಿತ್ತು ಎಂದರೆ ನಿಜ. ಆರೋಪಿತರು ನಮಗೆ ಹೊಡೆ ಬಡಿ ಮಾಡಿಲ್ಲ ಮತ್ತು ಅವಾಚ್ಯ ಶಬ್ಧಗಳಿಂದ ಬೈದಿಲ್ಲ ಎಂದರೆ ಸರಿ ಅಲ್ಲ. ನನ್ನ ತಾಯಿ ದೇವಕ್ಕ ಮತ್ತು ನನ್ನ ಅತ್ತೆ ನಿಂಗವ್ವಳಿಗೂ ಸಹ ಆರೋಪಿತರು ಹೊಡೆ ಬಡಿ ಮಾಡಿಲ್ಲ ಮತ್ತು ಅವಾಚ್ಯ ಶಬ್ಧಗಳಿಂದ ಬೈದಿಲ್ಲ ಎಂದರೆ ಸರಿ ಅಲ್ಲ. ಈಗ ನಾನು ಮತ್ತು ಆರೋಪಿತರು ರಾಜೀ ಮಾಡಿಕೊಂಡಿದ್ದೇವೆಂದರೆ ನಿಜ. ಆರೋಪಿತರಿಗೆ ಹೇಗಾದರೂ ಮಾಡಿ ತೊಂದರೆ ಕೊಡಬೇಕು ಎಂದು ನಾನು ಸುಳ್ಳು ದೂರು ಕೊಟ್ಟಿದ್ದೇನೆಂದರೆ ಸರಿ ಅಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್)**
**ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ರೋಣ.**